# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.21-2015** **ಡಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಶ್ರೀಕಂಠ<br>ಮಹದೇಶ್ವರ ಲೇಔಟ್, ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 26-08-2023. |

**ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್.ಎಸ್.ಜೇ ವಕೀಲರಿಂದಃ**

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುತ್ತದೆ ದಿ.28-04-2008 ರಂದು ನಾನು ವಾದಿಯಿಂದ ನನ್ನ ದರ್ದು ನಿಮಿತ್ತ ರೂ.1,10,000/-ಗಳನ್ನು ಪಡೆದುಕೊಂಡು ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿದ್ದೆನು ಎಂದರೆ  ಸರಿ. ನಾನು ದಾವಾ ಷೆಡ್ಯೂಲ್ ಸ್ವತ್ತಿನ ಬಾಬ್ತು ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿದ್ದೆನು ಎಂದರೆ ಸರಿ. ತದನಂತರ ವಾದಿ ನನ್ನನ್ನು ಕ್ರಯ ಪತ್ರ ನೋಂದಣಿ ಮಾಡಿಕೊಡುವಂತೆ ಕೇಳಿದಾಗ ದಾಖಲೆಗಳು ಸಿದ್ದವಾಗಿರುವುದಿಲ್ಲ ಎಂದು ಪುನಃ ದಿ.26/09/2012 ರಂದು ವಾದಿಗೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ರ 2 ನೇ ಪುಟದ 2 ನೇ ಖಂಡಿಕೆಯ 6 ನೇ ಸಾಲಿನಲ್ಲಿ ಸದರಿ ಸ್ವತ್ತನ್ನು "ನಾನು ಈ ಹಿಂದೆ ನಿಮಗೆ ಕ್ರಯ ಕರಾರು ಪತ್ರ ಬರೆದುಕೊಟ್ಟು ಅದರ ಪ್ರಕಾರ ದಾಖಲಾತಿಗಳೊಡನೆ ಬಂದು ರಿಜಿಸ್ಟರ್ ಮಾಡಿಕೊಡಲು ನನ್ನಿಂದ ಸಾಧ್ಯವಾಗದ ಕಾರಣ ಷೆಡ್ಯೂಲ್ ಸ್ವತ್ತಿನ ಮೇಲೆ ನಿಮಗೆ ಮಾಲೀಕತ್ವಕ್ಕೆ ವಂಚನೆ ಆಗದಿರಲಿ ಎಂದು ನಾನು ಈ ದಿನ, ಈ ಮತ್ತೆ ಈ ಕ್ರಯದ ಒಪ್ಪಂದದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದು  ಬರೆಯಲಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿ ನೀಡಿದ್ದ ರೂ.1,10,000/- ಗಳ ಪೈಕಿ ನಾನು ವಾದಿಗೆ ರೂ.1,00,000/- ಗಳನ್ನು ಪಾವತಿ ಮಾಡಿದ್ದು ಉಳಿಕೆ ರೂ.10,000/- ಗಳ ಬಾಬ್ತು ಭದ್ರತೆಗಾಗಿ ನಿಪಿ-1 ಅನ್ನು ಬರೆದು ಕೊಟ್ಟಿರುವುದಾಗಿ ನುಡಿಯುತ್ತಾರೆ. ನಿಪಿ-1 ರಲ್ಲಿನ ಸಹಿ ನನ್ನದೇ ಆಗಿರುತ್ತದೆ. ಆದರೆ ನಾನು ಖಾಲಿ ಪತ್ರಕ್ಕೆ ನನ್ನ ಸಹಿಯನ್ನು ಹಾಕಿಕೊಟ್ಟಿರುತ್ತೇನೆ

ಎಂದು ನುಡಿಯುತ್ತಾರೆ. ನಿಪಿ-1 ಕ್ಕೆ ಪತ್ರ ಬರಹಗಾರರಾದ ಬಿ.ನಾಗರಾಜೇ ಅರಸ್ ರವರು ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನಾನು ಅಲ್ಲಿಗೆ ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ.

2. ನಾನು 10 ನೇ ತರಗತಿವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ಸಾಮಾನ್ಯವಾಗಿ ನಾನು ಯಾವುದೇ ದಾಖಲೆಗೆ ಸಹಿ ಮಾಡಬೇಕಾದರೆ ಓದಿ ಸಹಿ ಮಾಡುತ್ತೇನೆ ಎಂದರೆ ಸಾಕ್ಷಿ ನಾನು ಇದುವರೆವಿಗೂ ಆ ರೀತಿ ಯಾವುದೇ ದಾಖಲೆಗೆ ಸಹಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ದಿ.28-04-2008 ರ ಕರಾರು ಪತ್ರವನ್ನು ನಾನೇ ಬರೆದುಕೊಟ್ಟು ನನ್ನ ಸಹಿ ಮಾಡಿರುತ್ತೇನೆ. ಸಾಮಾನ್ಯವಾಗಿ ಹಣವನ್ನು ವಾಪಸ್ಸು ಮಾಡಿದ ನಂತರ ತೀರುವಳಿ ಪತ್ರವನ್ನು ಬರೆದುಕೊಡಲಾಗುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ವಾದಿಯು ನನ್ನಿಂದ ರೂ.1,00,000/- ಗಳನ್ನು ಪಡೆದುಕೊಂಡು ದಿ.28-04-2008 ರ ನೋಟರಿ ಸಮಕ್ಷಮ ಆದ ಕ್ರಯ ಕರಾರು ಪತ್ರವನ್ನು ನನಗೆ ವಾದಿ ವಾಪಸ್ಸು ಮಾಡಿ ನನ್ನಿಂದ ರೂ.10,000/-ಗಳ ಭದ್ರತೆಗಾಗಿ ಒಂದು ಖಾಲಿ ಛಾಪಾಕಾಗದಕ್ಕೆ ಸಹಿ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಗೆ ನಾನು ನೀಡಿದ ರೂ.1,00,000/- ಗಳ ಭದ್ರತೆಗಾಗಿ ಯಾವುದಾದರೂ ದಾಖಲಾತಿಯನ್ನು ಬರೆಸಿಕೊಂಡಿದ್ದೀರಾ ಎಂಬ ಪ್ರಶ್ನೆಗೆ ವಾದಿ ನನ್ನಿಂದ ರೂ.1,00,000/- ಗಳನ್ನು ಪಡೆದುಕೊಂಡು ದಿ.28-04-2008 ರ ಕ್ರಯದ ಕರಾರು ಪತ್ರವನ್ನು ನನಗೆ ವಾಪಸ್ಸು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ನಾನು ವಾದಿಗೆ ನೀಡಬೇಕಾದ ರೂ.10,000/- ಗಳ ಭದ್ರತೆಗಾಗಿ ನಿಪಿ-1 ಅನ್ನು ಬರೆದುಕೊಟ್ಟಿರುವುದಿಲ್ಲ, ಎಲ್ಲಾ ವಿಚಾರ ಗೊತ್ತಿದ್ದು ದಿ.28-04-2008 ರ ಕ್ರಯದ ಕರಾರಿಗೆ ಬದಲಾಗಿ ನಿಪಿ-1 ಅನ್ನು ಬಿ.ನಾಗರಾಜೇಅರಸ್ ರವರ ಮುಖೇನ ಬರೆಸಿ ವಾದಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ದಿ.28-04-2008 ರ ಕ್ರಯದ ಕರಾರು ಪತ್ರಕ್ಕೆ ಅನುಗುಣವಾಗಿ ನಿಪಿ-1 ಅನ್ನು ಬರೆದುಕೊಟ್ಟಿದ್ದರು ಬರೆದುಕೊಟ್ಟಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3.ದಿ.30-10-2014 ರಂದು ವಾದಿಯೂ ನೀಡಿದ ತಿಳುವಳಿಕೆಗೆ ನಾನು ಪ್ರತ್ಯೂತ್ತರವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ವಕೀಲರಿಗೆ ನೋಟಿಸ್ ಬಂದ ವಿಚಾರವನ್ನು ತಿಳಿಸಿ ಪ್ರತ್ಯೂತ್ತರವನ್ನು ನೀಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನೋಟಿಸ್ ಬಂದ ನಂತರ ನಾನು ನನ್ನ ವಕೀಲರೊಂದಿಗೆ ವಾದಿಯನ್ನು ಭೇಟಿ ಆಗಿ ಹಣ ನೀಡಿ

ರಾಜಿ ಮಾಡಿಕೊಳ್ಳುವುದಾಗಿ ತಿಳಿಸಿದೆನು ಎಂದರೆ ಸರಿಯಲ್ಲ. ವಾದಿ ನಾನು ಆಸ್ತಿ ನೀಡುತ್ತೇನೆ ಎಂದು ನನಗೆ ಹಣ ನೀಡಿದ್ದು, ಆದರೆ ನಾನು ಅವರಿಗೆ ಮೋಸ ಮಾಡುವ ಉದ್ದೇಶದಿಂದ ಹಣ ಮರುಪಾವತಿ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ಆಸ್ತಿ ಮತ್ತು ನಿವೇಶನಗಳ ಬೆಲೆ ಗಗನಕ್ಕೆ ಏರಿರುವುದರಿಂದ ಷೆಡ್ಯೂಲ್ ಸ್ವತ್ತನ್ನು ರೂ.1,10,000/- ಗಳಿಗೆ ಬರೆದುಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ವೇಳೆ ನಾನು ವಾದಿಗಳಿಗೆ ಕ್ರಯ ಪತ್ರವನ್ನು ಬರೆದುಕೊಡಲು ಸಾಧ್ಯವಾಗದೇ ಇದ್ದ ಪಕ್ಷದಲ್ಲಿ 2008 ರಿಂದ ಇಲ್ಲಿಯವರೆವಿಗೆ ವಾದಿಯವರು ನೀಡಿರುವ ರೂ.1,10,000/- ಗಳಿಗೆ ನನ್ನಿಂದ ಬಡ್ಡಿಯನ್ನು ಪಡೆಯಲು ವಾದಿಯರು ಅರ್ಹರಾಗಿರುತ್ತಾರೆ ಎಂದರೆ ಸರಿಯಲ್ಲ.

4. ರೇವಣ್ಣನವರು ಸಹ ನನ್ನ ವಿರುದ್ದ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಓ.ಎಸ್.19/2015 ರಂತೆ ಕರಾರಿನ ನಿರ್ದಿಷ್ಟ ಅನುಷ್ಠಾನಕ್ಕಾಗಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**